ಮೈಲುಗಟ್ಟೆ ಕಾಡು. ಜನರ ಓಡಾಟ ಕಮ್ಮಿ. ಯಾರೂ ತಲೆ ಕೆಡಿಸಿಕೊಂಡಿರಲಿಲ್ಲ. ಎರಡೆಕರೆ ಸಮತಟ್ಟುಮಾಡಿ ಎರಡು ಚೀಲ ಭತ್ತ ಬೆಳೆದಾಗ ದನ ಕಾದರೆ ಜಾಸ್ತಿ ಸಿಗತಿತ್ತು ಅಂತ ಎಲ್ಲ ನಗಾಡಿದರು. ಬೇರೆಯಾಗಿದ್ದ ಒಂಟಿಗದ್ದೆ. ಹಗಲತ್ತು ಮರದಿಂದ ಗದ್ದೆಗಿಳಿವ ಮಂಗಗಳು; ರಾತ್ರಿ ಎಲ್ಲಾ ಜಾತಿಯ ಕಾಡುಪ್ರಾಣಿಗಳು. ಹಗಲು ರಾತ್ರಿ ಕಾಯುವ ಕೆಲಸ. ಮಾಳ ಕಟ್ಟಿಕೊಂಡು ಮಲಗಿದವನಿಗೆ ಬೆಳದಿಂಗಳಲ್ಲಿ ಮೊಲಗಳು ಸಸಿ ತಿನ್ನುವುದು ಕಾಣುತ್ತಿತ್ತು. ಕತ್ತಲರಾತ್ರಿಯ ಶಬ್ದಗಳು ಯಮ್ಮೆಗುಡ್ಡದ ಹಿಂದಿನ ಮಸಣದಿಂದ ಏನೇನೊ ಆಕೃತಿಗಳು ಬರುವ ಕಲ್ಪನೆ ಹುಟ್ಟಿಸುತ್ತಿತ್ತು. ಹಾಲುಗಾಳು ಕಟ್ಟಿದ ಸಮಯ. ರಾತ್ರಿ ಇದ್ದಕ್ಕಿದ್ದಂತೆ ಸದ್ದು ಕೇಳಿ ನೋಡಿದರೆ ಸುಮಾರು ಪ್ರಾಣಿಗಳು ತೆನೆ ಜಬಡುತ್ತಿವೆ. ಹಂದಿ ಹಿಂಡೆಂದು ಗೊತ್ತಾದದ್ದೇ, ಇನ್ನು ಬೆಳೆ ಉಳಿಯದೆಂಬ ಸಂಕಟದಲ್ಲಿ ಕತ್ತಿ ಹಿಡಿದುಕೊಂಡು ಕೆಳಗೆ ಹಾರಿದ್ದ. ಓಡುತ್ತಿರುವ ಹಿಂಡಿನಲ್ಲಿ ಹಿಂದುಳಿದ ಮರಿಗಳೆರಡರ ಮೂತಿಯನ್ನು ಕತ್ತಿಯಿಂದ ಕೊಚ್ಚಿದ. ದೊಡ್ಡವು ಹಠಾತ್ ತಿರುಗಿ ದಾಳಿಗೆ ಧಾವಿಸಿದ್ದು ಅರಿವಾಗಿ ಕೂದಲೆಳೆಯಲ್ಲಿ ತಪ್ಪಿಸಿಕೊಂಡು ಮಾಳದ ಅಟ್ಟಕ್ಕೆ ಹಾರಿಕೊಂಡು ಬಚಾವಾಗಿದ್ದ. ಮರುದಿನ ಕೇರಿಗೆ ಗೊತ್ತಾಗಿ ಓಡೋಡಿ ಬಂದವರು ರಕ್ತದ ಜಾಡಲ್ಲಿ ಹುಡುಕಿ, ಗದ್ದೆಯಲ್ಲಿ ರಕ್ತಸ್ರಾವವಾಗಿ ಬಿದ್ದಿದ್ದ ಮರಿಗಳನ್ನು ತಂದು ಸಂತೋಷಾತಿರೇಕದಲ್ಲಿ ಗುಡ್ಡದ ಮರೆಯಲ್ಲಿ ಹಸಿಗೆ ಮಾಡುತ್ತಾ 'ಇನ್ನಿಂತಾ ಸಾಹ್ಸಕ್ ಹೋಗ್ಬಾಡಲೆ... ಹಂದಿ ಸಾವಾಸ ಗೊತ್ತಿಲ್ ನಿನಗ...' ಅಂತ ಎಚ್ಚರಿಸುವ ದನಿಯಲ್ಲೇ ಬಾಯಲ್ಲಿ ನೀರು ತರಿಸಿಕೊಳ್ಳುತ್ತಿದ್ದರು. ಮಾಂಸ ಕಡಿದು ಪಾಲುಮಾಡಿ ಹಂಚಿಕೊಂಡು ಹೊರಟುಹೋದರು. ಮುಸ್ಸಂಜೆಗೆ ಬಂದ ಅಪ್ಪ ಮಾಂಸದೂಟದ ಗಂಟು ಕೊಟ್ಟವ, ಅಭಿಮಾನ ಸುರಿಸುತ್ತ ತಳದಲ್ಲಿ ಕಾಲುವೇಸಿ ಉಳಿದಿದ್ದ ಬಾಟ್ಲಿ ಕೊಟ್ಟ. ಅವನಾಗಲೇ ತೆಗೆದುಕೊಂಡಿದ್ದು ಗೊತ್ತಾಗುತ್ತಿತ್ತು.

ಆ ಕಾಲದಲ್ಲಿ ತನ್ನ ಕೇರಿಯಲ್ಲೇ ಸಾಲೆಗೆ ಹೋದವರು ಎರಡುಮೂರು ಹುಡುಗರು. ಕೊರೆಬೀಡಿ ಹನಿಮ್ಯ, ಗುಬ್ಬಕ್ಕನ ಶೀಂಗ್ಯ ಮತ್ತು ತಾನು. ಅದೇನಾತೋ ಅಕ್ಷರ ತಿದ್ದೋದು, ಬಾಯಿಪಾಠ ಮಾಡೋದು ಭಯಂಕರ ಹಿಂಸೆ ಅನಿಸಿ ಎಲ್ಲಾ ಎರಡು ವರ್ಷಕ್ಕೆ ಬಿಟ್ಟು ದನಾ ಕಾಯವುದು ಮೇಲ್ಜಾತಿ ಜನರ ಕೆಲಸಕ್ಕೆ ಹೋಗೋದರಲ್ಲಿ ಬಿಡುಗಡೆ ಕಂಡುಕೊಂಡರು. ಈಗ ಸುಮಾರು ಹುಡುಗರು ಹೈಸ್ಕೂಲಿಗೆಲ್ಲ ಹೋಗತಿದಾರೆ. ನಾಕುವರ್ಷ ಮೈ ನೆಣ ಸುರಿಸಿದಮೇಲೆ ಅಂತು ಹತ್ತು ಹದಿನೈದು ಚೀಲ ಬತ್ತ ಕೈಗೆ ಸಿಗುವಂತಾಗಿ ಕೇರಿಯವರಲ್ಲಿ ತನ್ನ ಒಜ್ಜೆ ಏರಿತ್ತು. ಸ್ವಂತ ಸಾಗುವಳಿಯಿದ್ದ ಕುಳ ಅಂತ ಕೇರಿಯವರು ಹೊರಗೆ ಗೌರವಿಸುತ್ತ 'ಸರಕಾರದ್ ಜಾಗ, ವಂದಿನಾ ಹೋಗಾದೆ...' ಅಂತ ಕರುಬಿನಲ್ಲಿ ಹೇಳಿಕೊಳ್ಳುತ್ತಿದ್ದರು. ಸಂಬಂಧ ಮಾಡಲು ಕೇರಿಯ ಸುಮಾರು ಜನರಿಗೆ ಆಸೆಯಿತ್ತು. ಪ್ರಾಯದ ಹುಡುಗಿಯರು ತುದಿಗಾಲಲ್ಲಿ ನಿತ್ತಿದ್ದರು. ಎತ್ತರದ ದಷ್ಟಪುಷ್ಟ ಮೈಕಟ್ಟಿನ, ಹುಳ್ಳಿಬಸ್ಯನ ಮಗಳು ತಾಮರಿ ಕಣ್ಣಲ್ಲಿ, ಸೆರಗೆಳದುಕೊಳ್ಳುವ ವರಸೆಯಲ್ಲಿ, ಅಂಗಾಂಗ ಚಲನೆಯಲ್ಲಿ ಏನು ಕಮ್ಮಿ ಒತ್ತಾಸೆ ವ್ಯಕ್ತಪಡಿಸಿದ್ದಳ? ಒಂದಿನ, 'ಮಾಳಕ್ಕೆ ಕರದ್ರ ಬರ್ತೇನಿ... ಇಲ್ಲ ಅನಾಕ್ಯಲ್ಲ...' ಅಂತನೂ ಕಿರುನಗುತ್ತ ಹೇಳಿಬಿಟ್ಟಿದ್ದಳು!

ಬಾಯಿಗೂಡಿದ ತನ್ನ ಎತ್ತನ್ನು ಮಾರಿ ಒಂದು ಗಿಡ್ಡಗಳ ಜತೆ ತರಲು ಬಂಕಸಾಣ ಜಾತ್ರೆಗೆ ಹೋಗಿದ್ದ ದೊಡ್ಡೀರ್ಯ. ಎತ್ತರನ ದೊಡ್ಡಬೆಲೆಯ ಜಾತಿಎತ್ತುಗಳೇ ಜಾಸ್ತಿಯಿದ್ದವು. ಅಂತೂ ಎರಡುದಿನ ಉಳಿದು, ತನ್ನೆತ್ತುಗಳ ಬದಲಿಗೆ ಒಂದು ಗಿಡ್ಡಗಳ ಜೊತೆಯನ್ನು ಹೊಂದಿಸಿಕೊಂಡವನಿಗೆ ಮೇಲೆ ಒಂದಿಷ್ಟು ದುಡ್ಡುಳಿದಿತ್ತು. ಅಲ್ಲಿ ಬಂಕಸಾಣದ ಜರಡಿದುಗ್ಗನ ಪರಿಚಯವಾಗಿತ್ತು. ಆ ಊರ ಕೇರಿಯಲ್ಲಿ ಅರ್ಧ ಎಕರೆ ಸ್ವಂತ ಜಮೀನಿದ್ದ ಮನುಷ್ಯನಾದ ಜರಡಿದುಗ್ಗ ಅಂತಸ್ತಿಗೆ ತಕ್ಕ ಸಂಬಂಧ ಹುಡುಕುತ್ತಿದ್ದ. ಅನಾಯಾಸವಾಗಿ ಸಿಕ್ಕ ದೊಡ್ಡೀರ್ಯನನ್ನು ಮನೆಗೆ ಕರೆದೊಯ್ದ. ಜಾತ್ರೆಯಲ್ಲಿ ಕೊಂಡ ಕಪ್ಪಿನಲ್ಲಿ ಚಾ ಮಾಡಿಸಿ ಕೊಟ್ಟ. ಅವನ ಮಗಳು ಸುಗಣೆ ಇವನೆದುರು ಕೆಲಸವಿರುವಂತೆ